ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 25-02-1991.

# "ಯೋಚನೆ ಮತ್ತು ಕರ್ಮದಲ್ಲಿ ಸಮಾನತೆಯನ್ನು ತರುವುದೇ ಪರಮಾತ್ಮನ ಪ್ರೀತಿಯನ್ನು ನಿಭಾಯಿಸುವುದು"

(सोच और कर्म में समानता लाना ही परमात्म प्यार निभाना है)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಬಾಪ್‌ದಾದಾರವರು ತನ್ನ ಸರ್ವ ಸ್ವರಾಜ್ಯಾಧಿಕಾರಿ ಮಕ್ಕಳನ್ನು ನೋಡಿ ಹರ್ಷಿತವಾಗುತ್ತಿದ್ದೇವೆ. ಏಕೆಂದರೆ ಸ್ವರಾಜ್ಯಾಧಿಕಾರಿಯೇ ಅನೇಕ ಜನ್ಮಗಳಿಗೆ ವಿಶ್ವರಾಜ್ಯಾಧಿಕಾರಿ ಆಗಿಬಿಡುತ್ತಾರೆ. ಅಂದಮೇಲೆ ಇಂದು ಡಬಲ್ ವಿದೇಶಿ ಮಕ್ಕಳನ್ನು ಸ್ವರಾಜ್ಯದ ಸಮಾಚಾರವನ್ನು ಕೇಳುತ್ತಿದ್ದೇವೆ. ಪ್ರತಿಯೊಬ್ಬ ರಾಜ್ಯಾಧಿಕಾರಿಯ ರಾಜ್ಯ ಚೆನ್ನಾಗಿ ನಡೆಯುತ್ತಿದೆಯಾ? ತಮ್ಮ ರಾಜ್ಯವನ್ನು ನಡೆಸುವಂತಹ ಜೊತೆಗಾರ ಸಹಯೋಗಿಗಳು ಸದಾ ಸಮಯದಲ್ಲಿ ಸಹಯೋಗವನ್ನು ಕೊಡುತ್ತಿದ್ದಾರೆಯೇ ಅಥವಾ ಮಧ್ಯ-ಮಧ್ಯದಲ್ಲಿ ಮೋಸ ಮಾಡಿಬಿಡುತ್ತಾರಾ? ಎಷ್ಟೆಲ್ಲಾ ಸಹಯೋಗಿ ಕರ್ಮಚಾರಿ ಕರ್ಮೇಂದ್ರಿಯಗಳು ಇವೆಯೋ ಸ್ಥೂಲವಾಗಿರಬಹುದು ಅಥವಾ ಸೂಕ್ಷ್ಮವಾಗಿರಬಹುದು ಎಲ್ಲಾ ತಮ್ಮ ಅಧೀನತೆಯಲ್ಲಿ ಇವೆಯಾ? ಯಾರಿಗೆ ಯಾವ ಸಮಯದಲ್ಲಿ ಯಾವ ಆರ್ಡರ್ ಮಾಡಿದರೆ ಆ ಸಮಯದಲ್ಲಿ ಆ ವಿಧಿಯ ಮೂಲಕ ನಿಮಗೆ ಸಹಯೋಗಿ ಆಗುತ್ತಾರೆಯೇ? ಪ್ರತಿ ದಿನ ತಮ್ಮ ರಾಜ್ಯ ದರ್ಬಾರನ್ನು ಮಾಡುತ್ತೀರಾ? ರಾಜ್ಯವ್ಯವಹಾರ ಎಲ್ಲಾ 100% ಆಜ್ಞಾಕಾರಿಯಾಗಿ, ಪ್ರಾಮಾಣಿಕವಾಗಿ, ಎವರ್‌ರೆಡಿ ಆಗಿದಿಯಾ? ಏನಾದರೂ ಏರು-ಪೇರು ಇದೆಯೋ? ಚೆನ್ನಾಗಿದೆಯೋ, ಬಹಳ ಚೆನ್ನಾಗಿದೆಯೋ ಅಥವಾ ಬಹಳ- ಬಹಳ-ಬಹಳ ಚೆನ್ನಾಗಿದೆಯೋ? ರಾಜ್ಯ ದರ್ಬಾರು ಚೆನ್ನಾಗಿ ಸಫಲತಾಪೂರ್ವಕವಾಗಿ ಆಗುತ್ತದೆಯೋ ಅಥವಾ ಆಗಾಗ ಸಹಯೋಗಿ ಕರ್ಮಚಾರಿಯು ಏರುಪೇರು ಮಾಡುತ್ತಿಲ್ಲಾ ತಾನೇ? ಈ ಹಳೆಯ ಪ್ರಪಂಚದ ರಾಜ್ಯಸಭೆಯ ಏರುಪೇರಂತೂ ಚೆನ್ನಾಗಿ ತಿಳಿಕೊಂಡಿದ್ದೀರಿ ಅದರಲ್ಲಿ ಕಾನೂನು ಇಲ್ಲ, ಆಜ್ಞೆಯೂ ಸಹ ಇಲ್ಲ. ಆದರೆ ತಮ್ಮ ರಾಜ್ಯ ದರ್ಬಾರಿನಲ್ಲಿ ಕಾನೂನು (ಲಾ ಫುಲ್) ಇದೆ ಮತ್ತೆ ಸದಾ ಆಗಲಿ ಪ್ರಭು! ಈ ಆರ್ಡರ್ ಮೇಲೆ ನಡೆಯುತ್ತದೆ. ಎಷ್ಟು

ರಾಜ್ಯಾಧಿಕಾರಿ ಶಕ್ತಿಶಾಲಿ ಆಗುತ್ತಾರೋ ಅಷ್ಟು ರಾಜ್ಯದ ಸಹಯೋಗಿಗಳು ಸ್ವತಃವಾಗಿ ಸದಾ ಅಜ್ಞೆಯ ಪ್ರಮಾಣವಾಗಿ ನಡೆಯುತ್ತಾರೆ. ರಾಜ್ಯಾಧಿಕಾರಿ ಇದನ್ನು ಕೇಳಬೇಡ, ಇದನ್ನು ಮಾಡಬೇಡ. ಇದನ್ನು ಮಾತನಾಡಬೇಡ ಎಂದು ಆಜ್ಞೆ ಮಾಡಿದ್ದೇ ಆದರೆ ಒಂದು ಸೆಕೆಂಡಿನಲ್ಲಿ ಆಜ್ಞೆಯ ಪ್ರಮಾಣವಾಗಿ ಕಾರ್ಯವನ್ನು ಮಾಡಬೇಕು. **ತಾವು ನೋಡಬೇಡ ಎಂದು ಆಜ್ಞೆ ಮಾಡುವುದು ಆದರೆ ನೋಡಿದ ನಂತರ ತಪ್ಪಾಯಿತು ಕ್ಷಮಿಸಿ ಎಂದು ಕೇಳುವುದು ಈ ರೀತಿ ಆಗಬಾರದು. ಮಾಡಿದ ನಂತರ ಯೋಚನೆ ಮಾಡಿದರೆ ಅವರನ್ನು ಬುದ್ಧಿವಂತ ಜೊತೆಗಾರರೆಂದು ಕರೆಯುತ್ತಾರೇನು? ಮನಸ್ಸಿಗೆ ವ್ಯರ್ಥ ಸಂಕಲ್ಪಗಳನ್ನು ಮಾಡಬಾರದು ಎಂದು ಆಜ್ಞೆ ಕೊಟ್ಟರೆ ಒಂದು ಕ್ಷಣದಲ್ಲಿ ಫುಲ್ ಸ್ಟಾಪ್(ಬಿಂದು). ಎರಡು ಕ್ಷಣಗಳೂ ಆಗಬಾರದು ಇದನ್ನೇ ಯುಕ್ತಿಯುಕ್ತ ರಾಜ್ಯ ದರ್ಬಾರ್(ರಾಜ್ಯಸಭೆ) ಎಂದು ಕರೆಯುತ್ತಾರೆ**. ಈ ರೀತಿಯ ರಾಜ್ಯಾಧಿಕಾರಿಯಾಗಿದ್ದೀರಾ? ಪ್ರತಿ ದಿನ ರಾಜ್ಯದರ್ಬಾರು ಮಾಡುತ್ತೀರೋ ಅಥವಾ ಯಾವಾಗ ನೆನಪು ಬರುತ್ತದೋ ಆಗ ಆಜ್ಞೆ ಮಾಡುತ್ತೀರೋ? ಪ್ರತಿ ದಿನ ರಾತ್ರಿ ತಮ್ಮ ಸಹಯೋಗಿ ಕರ್ಮಾಚಾರಿಗಳನ್ನು ಪರಿಶೀಲನೆ ಮಾಡಿ. ಒಂದುವೇಳೆ ಯಾವುದೇ ಕರ್ಮೇಂದ್ರಿಯಗಳಿಂದ ಅಥವಾ ಕರ್ಮಾಚಾರಿಗಳಿಂದ ಪದೇ-ಪದೇ ತಪ್ಪು ಆಗುತ್ತಾ ಇದ್ದಿದ್ದೆ ಆದರೆ ಆ ತಪ್ಪಾದ ಕಾರ್ಯವನ್ನು ಮಾಡುತ್ತಾ ಮಾಡುತ್ತಾ ಸಂಸ್ಕಾರವು ಪಕ್ಕಾ ಆಗಿಬಿಡುತ್ತದೆ. ಮತ್ತೆ ಪರಿವರ್ತನೆ ಮಾಡಿಕೊಳ್ಳುವುದರಲ್ಲಿ ಸಮಯ ಹಿಡಿಯುತ್ತದೆ ಮತ್ತು ಪರಿಶ್ರಮವೂ ಪಡಬೇಕಾಗುತ್ತದೆ. ಆ ಸಮಯದಲ್ಲಿ ಪರಿಶೀಲನೆ ಮಾಡಿಕೊಂಡು ಪರಿವರ್ತನೆ ಮಾಡಿಕೊಳ್ಳುವಂತಹ ಶಕ್ತಿ ಕೊಟ್ಟಿದ್ದೇ ಆದರೆ ಸದಾಕಾಲಕ್ಕಾಗಿ ಸರಿಯಾಗಿಬಿಡುತ್ತದೆ. ಕೇವಲ ಪದೇ-ಪದೇ ಇದು ತಪ್ಪು, ಸರಿ ಅಲ್ಲ ಎಂದು ಪರಿಶೀಲನೆ ಮಾಡಿಕೊಂಡು ಪರಿವರ್ತನೆ ಆಗುವಂತಹ ಶಕ್ತಿಯಿಲ್ಲದಿದ್ದರೆ. ಕೇವಲ ಪದೇ-ಪದೇ ಪರಿಶೀಲನೆ ಮಾಡಿಕೊಳ್ಳುವುದರಿಂದ ಪರಿವರ್ತನೆ ಆಗುವುದಿಲ್ಲ. ಆದ್ದರಿಂದ ಮೊದಲು ಕರ್ಮೇಂದ್ರಿಯಗಳಿಗೆ ಜ್ಞಾನದ ಶಕ್ತಿ ಕೊಟ್ಟು ಪರಿವರ್ತನೆ ಮಾಡಿ. ಕೇವಲ ಇದು ತಪ್ಪು ಎಂದು ಯೋಚನೆ ಮಾಡಬೇಡಿ. ಆದರೆ ಸರಿ ಏನು ಮತ್ತೆ ಸರಿಯಾಗಿ ನಡೆಯುವಂತಹ ವಿಧಿ ಸ್ಪಷ್ಟವಾಗಿರಬೇಕು. ಒಂದುವೇಳೆ ಯಾರಿಗಾದರೂ ಹೇಳುತ್ತಾ ಇದ್ದರೆ ಹೇಳುವುದರಿಂದ ಪರಿವರ್ತನೆ ಆಗುವುದಿಲ್ಲ ಆದರೆ ಹೇಳುವುದರ ಜೊತೆ-ಜೊತೆ ವಿಧಿ ಸ್ಪಷ್ಟ ಮಾಡಿದ್ದರೆ ಸಿದ್ಧ ಆಗುತ್ತದೆ. ಯಾವ ಅತ್ಮರು ಸ್ವರಾಜ್ಯವನ್ನು ನಡೆಸುವುದರಲ್ಲಿ ಸಫಲರಾಗುತ್ತಾರೋ ಅವರು ಸದಾ ತಮ್ಮ ಪುರುಷಾರ್ಥದಿಂದ ಮತ್ತು ಅದರ ಜೊತೆ-ಜೊತೆಯಲ್ಲಿ ಯಾರೆಲ್ಲಾ ಸಂಪರ್ಕದಲ್ಲಿ ಬರುವಂತಹ ಆತ್ಮರೂ ಸಹ ಆ ಸಫಲ ಆತ್ಮನಿಂದ ಸಂತುಷ್ಟರಾಗಿರುತ್ತಾರೆ ಮತ್ತು ಸದಾ ಹೃದಯದಿಂದ ಆ ಆತ್ಮನ ಪ್ರತಿ ಧನ್ಯವಾದಗಳು ಹೊರ ಬರುತ್ತದೆ ಇದು ಸಫಲತಾ ರಾಜ್ಯಾಧಿಕಾರಿಯ ಚಿಹ್ನೆಯಾಗಿದೆ. ಸರ್ವರ ಹೃದಯದಿಂದ, ಹೃದಯದ ಧ್ವನಿಯಿಂದ ಆಹಾ-ಆಹಾ! ಎನ್ನುವ ಹಾಡು ಬರುತ್ತದೆ, ಅವರ ಕಿವಿಗಳಲ್ಲಿ ಸರ್ವರಿಂದ ಆಹಾ-ಆಹಾ! ಎನ್ನುವ ಧನ್ಯವಾದಗಳ ಸಂಗೀತ ಕೇಳುತ್ತಿರುತ್ತದೆ. ಈ ಹಾಡು ಸಹಜವಾಗಿ ಕೇಳುತ್ತದೆ. ಇದಕ್ಕೋಸ್ಕರ ಟೇಪ್ ರಿಕಾರ್ಡರ್ ಹಾಕುವಂತಹ ಆವಶ್ಯಕತೆ ಇರುವುದಿಲ್ಲ. ಅಂದಮೇಲೆ ಅಂತಹ ಸಫಲ ರಾಜ್ಯಾಧಿಕಾರಿ ಆಗಿದ್ದೀರಾ? ಏಕೆಂದರೆ **ಈಗಿನ ಸಫಲ ರಾಜ್ಯಾಧಿಕಾರಿಯೇ ಭವಿಷ್ಯದಲ್ಲಿ ಸಫಲತೆಯ ಫಲ ವಿಶ್ವರಾಜ್ಯಾಧಿಕಾರವನ್ನು ಪ್ರಾಪ್ತಿ ಮಾಡಿಕೊಳ್ಳುತ್ತಾರೆ. ಒಂದುವೇಳೆ ಸಂಪೂರ್ಣ ಸಫಲತೆ ಇಲ್ಲವೆಂದರೆ ಕೆಲವೊಂದು ಬಾರಿ 100% ಸಫಲತೆ, ಕೆಲವೊಂದುಬಾರಿ ಕೇವಲ ಸಫಲತೆ ಇರುತ್ತದೆ. 100% ಸಫಲತೆ ಇಲ್ಲವೆಂದರೆ ಅಂತಹ ರಾಜ್ಯಾಧಿಕಾರಿ ಆತ್ಮರಿಗೆ ವಿಶ್ವದ ರಾಜ್ಯ ಸಿಂಹಾಸನ, ಕಿರೀಟ ಪ್ರಾಪ್ತಿ ಆಗುವುದಿಲ್ಲ ಆದರೆ ರಾಯಲ್ ಪರಿವಾರದಲ್ಲಿ ಬರುತ್ತಾರೆ**. ಒಂದು ಸಿಂಹಾನಾಧಿಕಾರಿ ಮತ್ತೆ ಇನ್ನೊಂದು ಸಿಂಹಾಸನಾಧಿಕಾರಿ ರಾಯಲ್ ಪರಿವಾರ. ಸಿಂಹಾಸನಾಧಿಕಾರಿ ಅರ್ಥಾತ್ ವರ್ತಮಾನ ಸಮಯದಲ್ಲೂ ಸಹ ಸದಾ ಡಬಲ್ ಸಿಂಹಾಸನಾಧಿಕಾರಿ ಆಗಿರುತ್ತಾರೆ. ಡಬಲ್ ಸಿಂಹಾಸನ ಯಾವುದು? ಒಂದು ಅಕಾಲ ಸಿಂಹಾಸನ ಮತ್ತೆ ಇನ್ನೊಂದು ತಂದೆಯ ಹೃದಯ ಸಿಂಹಾಸನ. ಅಂದಮೇಲೆ ಯಾರು ಈಗ ಸದಾ ಡಬಲ್ ಸಿಂಹಾಸನಾಧಿಕಾರಿಯಾಗಿರುತ್ತಾರೋ, ಆಗಾಗ ಅಲ್ಲ, ಅಂತಹ ಸದಾ ಹೃದಯ ಸಿಂಹಾಸನಾಧಿಕಾರಿ ವಿಶ್ವದಲ್ಲೂ ಸಿಂಹಾಸನಾಧಿಕಾರಿಯಾಗಿರುತ್ತಾರೆ. ಅಂದಾಗ ಇಡೀ ದಿನದಲ್ಲಿ ಡಬಲ್ ಸಿಂಹಾನಾಧಿಕಾರಿ ಆಗಿದ್ದೇನೆಯೇ? ಎಂದು ಪರಿಶೀಲನೆ ಮಾಡಿಕೊಳ್ಳಿ. ಒಂದುವೇಳೆ ಸಿಂಹಾಸನಾಧಿಕಾರಿ ಆಗಿಲ್ಲವೆಂದರೆ ನಿಮ್ಮ ಸಹಯೋಗಿ ಕರ್ಮಾಚಾರಿ ಕರ್ಮೇಂದ್ರಿಯಗಳನ್ನೂ ಸಹ ನಿಮ್ಮ ಆಜ್ಞೆಯ ಪ್ರಮಾಣ ನಡೆಸಲು ಸಾಧ್ಯವಿಲ್ಲ. ರಾಜನ ಆಜ್ಞೆಯನ್ನು ಒಪ್ಪಿಕೊಳ್ಳುತ್ತಾರೆ. ರಾಜ ಸಿಂಹಾಸನದ ಮೇಲೆ ಇಲ್ಲವೆಂದರೆ

ಆಜ್ಞೆ ಮಾಡಿದರೂ ಒಪ್ಪಿಕೊಳ್ಳುವುದಿಲ್ಲ. ಈಗಿನ ಕಾಲದಲ್ಲಿ ಸಿಂಹಾಸನಕ್ಕೆ ಬದಲಾಗಿ ಕುರ್ಚಿಯಾಗಿದೆ. ಸಿಂಹಾಸನ ಸಮಾಪ್ತಿಯಾಗಿಬಿಟ್ಟಿದೆ. ಯೋಗ್ಯರಲ್ಲ ಎಂದರೆ ಸಿಂಹಾಸನವೂ ಸಹ ಸಮಾಪ್ತಿ ಆಗಿಬಿಟ್ಟಿದೆ. ಕುರ್ಚಿಯಮೇಲೆ ಇದ್ದರೆ ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಒಂದುವೇಳೆ ಕುರ್ಚಿಯಮೇಲೆ ಇಲ್ಲವೆಂದರೆ ಯಾರು ಒಪ್ಪಿಕೊಳ್ಳುವುದಿಲ್ಲ. ಆದರೆ ತಾವಂತೂ ಕುರ್ಚಿಯ ನೇತರಲ್ಲ. ಸ್ವರಾಜ್ಯಾಧಿಕಾರಿ ರಾಜ ಆಗಿದ್ದೀರಿ. ಎಲ್ಲರೂ ರಾಜ ಆಗಿದ್ದೀರೋ ಅಥವಾ ಕೆಲವರು ಪ್ರಜೆಗಳೂ ಸಹ ಆಗಿದ್ದೀರೋ? ರಾಜಯೋಗಿ ಅರ್ಥಾತ್ ರಾಜ. ನೋಡಿ ಎಷ್ಟು ಪದಮಾ-ಪದಮಾ-ಪದಮ್ ಭಾಗ್ಯವಂತರಾಗಿದ್ದೀರಿ. ಇಡೀ ಪ್ರಪಂಚ ಅದರಲ್ಲೂ ವಿದೇಶಗಳು ಏರುಪೇರಿನಲ್ಲಿ ಇದೆ. ಅವರು ಯುದ್ಧ ಮತ್ತು ಸೋಲಿನ ದ್ವಂದ್ವದಲ್ಲಿ ಇದ್ದಾರೆ. ಕೆಲವರು ಸೋಲುತ್ತಾರೆ. ಕೆಲವರು ಯುದ್ಧ ಮಾಡುತ್ತಾ ಇದ್ದಾರೆ ಮತ್ತೆ ಕೆಲವರು ಅದರ ಸ್ಥಿತಿಗತಿಯನ್ನು ಕೇಳಿ ಅದರ ಏರುಪೇರಿನಲ್ಲಿ ಇದ್ದಾರೆ. ಅಂದಾಗ ಅವರು ಸೋಲು ಮತ್ತು ಯುದ್ಧದ ಏರುಪೇರಿನಲ್ಲಿ ಇದ್ದಾರೆ ಆದರೆ ತಾವು ಬಾಪ್‌ದಾದಾರವರ ಪ್ರೀತಿಯಲ್ಲಿ ಇದ್ದೀರಿ. ಪರಮಾತ್ಮನ ಪ್ರೀತಿ ದೂರ- ದೂರದಿಂದ ಆಕರ್ಷಣೆ ಮಾಡಿ ಕರೆದುಕೊಂಡು ಬಂದಿದೆ. ಪರಿಸ್ಥಿತಿಗಳು ಎಂತಹದ್ದೇ ಆಗಿರಲಿ ಆದರೆ ಪರಮಾತ್ಮನ ಪ್ರೀತಿಯ ಮುಂದೆ ಪರಿಸ್ಥಿತಿಗಳು ಏನೂ ಮಾಡಲು ಸಾಧ್ಯವಿಲ್ಲ. ಪರಮಾತ್ಮನ ಪ್ರೀತಿ ಬುದ್ಧಿವಂತರಿಗಿಂತ ಬುದ್ಧಿವಂತವಾಗಿಸಿ ಪರಿಸ್ಥಿತಿಯನ್ನು ಶ್ರೇಷ್ಠ ಸ್ಥಿತಿಯಲ್ಲಿ ಬದಲಾವಣೆ ಮಾಡಿಬಿಡುತ್ತದೆ. ಡಬಲ್ ವಿದೇಶಿಯರಲ್ಲೂ ನೋಡಿ ಮೊದಲು ಪೋಲ್ಯಾಂಡಿನವರು ಎಷ್ಟು ಪ್ರಯತ್ನ ಮಾಡುತ್ತಿದ್ದರು. ಅಸಂಭವ ಆಗುತ್ತಿತ್ತು, ಈಗ ಏನಾಗಿದೆ? ರಷ್ಯಾದವರೂ ಸಹ ಅಸಂಭವ ಎಂದು ತಿಳಿಕೊಂಡಿದ್ದಾರೆ. 24 ಗಂಟೆ ಸಾಲಿನಲ್ಲಿ ನಿಲ್ಲಬೇಕಾಗಿದ್ದರೂ ಬಂದು ತಲುಪಿದ್ದೀರಲ್ಲವೇ? ಕಷ್ಟ ಸಹಜವಾಗಿಬಿಟ್ಟಿದೆ. ಅಂದಾಗ ಧನ್ಯವಾದಗಳು ಹೇಳುತ್ತೀರಲ್ಲವೇ. ಈ ರೀತಿ ಸದಾ ಆಗುತ್ತಾ ಇರುತ್ತದೆ. **ಅಂತ್ಯದಲ್ಲಿ ವಿಮಾನ ನಿಂತುಹೋದರೆ (ಬಂದ್) ನಾವು ಹೇಗೆ ಹೋಗುವುದು? ಎಂದು ಕೆಲವರು ಯೋಚನೆ ಮಾಡುತ್ತಾರೆ. ಪರಮಾತ್ಮ ಪ್ರೀತಿಯಲ್ಲಿ ಅಂತಹ ಶಕ್ತಿ ಇದೆ ಯಾರ ಕಣ್ಣಿನಲ್ಲಿ ಆದರೂ ಅಂತಹ ಜಾದೂ ಮಾಡಿಬಿಡುತ್ತಾರೆ ಅವರು ನಿಮ್ಮನ್ನು ತಲುಪಿಸಲು ಪರವಶವಾಗಿಬಿಡುತ್ತಾರೆ ಆದರೆ ಕೇವಲ ಪ್ರೀತಿ ಮಾಡುವಂತಹವರು ಅಲ್ಲ ಪ್ರೀತಿಯನ್ನು ನಿಭಾಯಿಸುವವರಾಗಬೇಕು.** ಪ್ರೀತಿ ಮಾಡುವುದು ಎಲ್ಲರಿಗೂ ಬರುತ್ತದೆ, ಆದರೆ ನಿಭಾಯಿಸುವುದು ಕೆಲ-ಕೆಲವರಿಗೆ ಮಾತ್ರ ಬರುತ್ತದೆ ಆದ್ದರಿಂದ ತಾವು ಕೆಲವರಲ್ಲಿ ಕೆಲವರಾಗಿದ್ದೀರಿ.

ಬಾಪ್‌ದಾದಾರವರು ಸದಾ ಡಬಲ್ ವಿದೇಶಿ ಮಕ್ಕಳನ್ನು ನೋಡಿ ಖುಷಿ ಪಡುತ್ತೇವೆ ಏಕೆಂದರೆ ಧೈರ್ಯದಿಂದ ತಂದೆಯ ಸಹಯೋಗಕ್ಕೆ ಪಾತ್ರರಾಗಿ ಅನೇಕ ಪ್ರಕಾರದ ಮಾಯೆಯ ಬಂಧನಗಳನ್ನು ಮತ್ತು ಅನೇಕ ರೀತಿ, ಪದ್ಧತಿಗಳ ಬಂಧನಗಳನ್ನು ದೂರ ಮಾಡಿ ಬಂದು ತಲುಪಿದ್ದೀರಿ. ಸಾಹಸವಂತೂ ಎಲ್ಲರೂ ಚೆನ್ನಾಗಿ ಇಟ್ಟಿದ್ದೀರಿ. ಈ ಸಾಹಸವೂ ಕಡಿಮೆ ಅಲ್ಲ. ಹೊಸಬರು ಆಗಿರಬಹುದು, ಹಳಬರು ಆಗಿರಬಹುದು ಇಬ್ಬರು ಒಟ್ಟಿಗೆ ಕುಳಿತಿದ್ದೀರಿ. ಇಬ್ಬರ ಸಾಹಸ ಚೆನ್ನಾಗಿದೆ. ತುಂಬಾ ಹಳಬರು ಇದ್ದಾರೆ. ಈ ಕಲ್ಪಕ್ಕೆ ಹೊಸಬರೂ ಸಹ ಇದ್ದಾರೆ. ಇಬ್ಬರ ಸಾಹಸವು ಚೆನ್ನಾಗಿದೆ. ಡಬಲ್ ವಿದೇಶಿಯರು ವಿಶೇಷ ಪುರುಷಾರ್ಥವನ್ನು ಮಾಡುತ್ತಾರೆ ಮತ್ತೆ ಆತ್ಮಿಕ ಸಂಭಾಷಣೆಯನ್ನೂ ಮಾಡುತ್ತಾರೆ - 108 ರ ಮಾಲೆಯಲ್ಲಿ ಖಂಡಿತ ಬರುತ್ತಾರೆ. ಕೆಲವರು ಬರಲು ಸಾಧ್ಯ ಆಗುತ್ತದೆಯೇ? ಎಂದು ಪ್ರಶ್ನೆ ಮಾಡಬಹುದು. ಅವಶ್ಯವಾಗಿ ಬರಲೇಬೇಕು. ಡಬಲ್ ವಿದೇಶಿಯರಿಗೂ ಸಹ ಮಾಲೆಯಲ್ಲಿ ಸೀಟ್ ರಿಜರ್ವ್ ಆಗಿದೆ. ಆದರೆ ಯಾರು ಮತ್ತೆ ಎಷ್ಟು ಎನ್ನುವುದು ಮುಂದೆ ತಿಳಿಸುತ್ತೇವೆ. ಅಂದಾಗ ನಂಬರ್ ಏಕೆ ಆಗುತ್ತದೆ? ಪ್ರತಿಯೊಬ್ಬರು ತಮ್ಮ ಅಧಿಕಾರದಿಂದ ಹೇಳುತ್ತೀರಿ 'ನನ್ನ ಬಾಬಾ ಎಂದು. ಅಂದಾಗ ಪೂರ್ತಿ ಅಧಿಕಾರವೂ ಇದೆ ಆದರೆ ನಂಬರ್ ಏಕೆ? ನಂಬರ್‌ವನ್ ಮತ್ತು ಎರಡನೇ ನಂಬರಿನವರಿಗೂ ಅಂತರ ಇರುತ್ತದಲ್ಲವೇ? ಇಷ್ಟೊಂದು ಅಂತರ ಏಕೆ ಬರುತ್ತದೆ? 15,000ದ ವಿಷಯ ಅಂತೂ ಬಿಟ್ಟುಬಿಡಿ. 108ರಲ್ಲಿಯೂ ನೋಡಿ ಎಲ್ಲಿ ಒಂದು ಮತ್ತು ಎಲ್ಲಿ 108? ಅಂದಮೇಲೆ ಏನು ಅಂತರ ಆಗಿದೆ? **ಧೈರ್ಯದಲ್ಲಿ ಎಲ್ಲರೂ ಪಾಸ್ (ಉತ್ತೀರ್ಣರು) ಆಗಿದ್ದೀರಿ ಆದರೆ ಯಾವ ಧೈರ್ಯಕ್ಕೆ ತಂದೆ ಮತ್ತು ಬ್ರಾಹ್ಮಣ ಪರಿವಾರದ ಮೂಲಕ ಸಹಯೋಗ ಸಿಗುತ್ತದೋ ಆ ಸಹಯೋಗವನ್ನು ಪ್ರಾಪ್ತಿ ಮಾಡಿಕೊಂಡು ಕಾರ್ಯದಲ್ಲಿ ಉಪಯೋಗಿಸುವುದು ಮತ್ತು ಸಮಯದಲ್ಲಿ ಸಹಯೋಗವನ್ನು ಉಪಯೋಗಿಸುವುದು, ಯಾವ ಸಮಯದಲ್ಲಿ ಯಾವ ಸಹಯೋಗ ಅರ್ಥಾತ್ ಶಕ್ತಿ ಬೇಕೋ ಆ ಶಕ್ತಿಯ ಮೂಲಕ ಸಮಯದಲ್ಲಿ**

**ಕಾರ್ಯವನ್ನು ಮಾಡುವುದು, ಈ ನಿರ್ಣಯ ಶಕ್ತಿ ಮತ್ತು ಕಾರ್ಯದಲ್ಲಿ ಉಪಯೋಗಿಸುವಂತಹ ಕಾರ್ಯ ಶಕ್ತಿಯಲ್ಲಿ ಅಂತರ ಆಗಿಬಿಡುತ್ತದೆ. ಸರ್ವಶಕ್ತಿವಂತ ತಂದೆಯ ಮೂಲಕ ಸರ್ವ ಶಕ್ತಿಗಳ ಆಸ್ತಿ ಎಲ್ಲರಿಗೂ ಸಿಗುತ್ತದೆ. ಕೆಲವರಿಗೆ 8 ಶಕ್ತಿಗಳು, ಕೆಲವರಿಗೆ 6 ಶಕ್ತಿಗಳು ಸಿಗುವುದಿಲ್ಲ. ಸರ್ವಶಕ್ತಿಗಳು ಸಿಗುತ್ತದೆ, ವಿಧಿಯಿಂದ ಸಿದ್ಧಿ ಪ್ರಾಪ್ತಿಯಾಗುತ್ತದೆ ಎಂದು ಮೊದಲೂ ಸಹ ತಿಳಿಸಲಾಗಿದೆ. ಕಾರ್ಯ ಶಕ್ತಿಯ ವಿಧಿ - ಒಂದಾಗಿದೆ ತಂದೆಯವರಾಗುವಂತಹ ವಿಧಿ. ಇನ್ನೊಂದು ತಂದೆಯ ಆಸ್ತಿ(ವಾರಸತ್ವ)ಯನ್ನು ಪ್ರಾಪ್ತಿ ಮಾಡಿಕೊಳ್ಳುವಂತಹ ವಿಧಿ, ಮೂರನೆಯದಾಗಿ ಪ್ರಾಪ್ತಿ ಮಾಡಿಕೊಂಡಿರುವಂತಹ ಆಸ್ತಿಯನ್ನು ಕಾರ್ಯದಲ್ಲಿ ಉಪಯೋಗಿಸುವಂತಹ ವಿಧಿ. ಅಂದಾಗ ಕಾರ್ಯದಲ್ಲಿ ಉಪಯೋಗಿಸುವ ವಿಧಿಯಲ್ಲಿ ಅಂತರ ಬರುತ್ತದೆ.** ಪಾಯಿಂಟ್ಸ್ ಅಂತೂ ಎಲ್ಲರ ಹತ್ತಿರ ಇದೆ. ಒಂದು ವಿಷಯದ ಮೇಲೆ ವರ್ಕ್‌ಶಾಪ್ ಮಾಡಿದಾಗ ಎಷ್ಟೋಂದು ಪಾಯಿಂಟ್ಸ್ ಹೊರ ಬರುತ್ತದೆ. ಅಂದಾಗ ಒಂದು ಪಾಯಿಂಟ್‌ನ್ನು ಬುದ್ಧಿಯಲ್ಲಿ ನೆನಪು ಇಟ್ಟುಕೊಳ್ಳಬೇಕು. ಇದು ಒಂದು ವಿಧಿಯಾಗಿದೆ. ಮತ್ತೆ ಇನ್ನೊಂದು ಬಿಂದು ಆಗಿ ಪಾಯಿಂಟ್‌ನ್ನು ಕಾರ್ಯದಲ್ಲಿ ತರುವುದು. ಬಿಂದು ರೂಪನೂ ಆಗಬೇಕು ಮತ್ತೆ ಪಾಯಿಂಟ್ಸ್ ನೆನಪೂ ಇರಬೇಕು. ಎರಡರ ಸಮತೋಲನೆ ಇರಬೇಕಾಗಿದೆ ಇದಾಗಿದೆ ನಂಬರ್‌ವನ್ ವಿಧಿ. ಇದರಿಂದ ನಂಬರ್‌ವನ್ ಸಿದ್ಧಿಯನ್ನು ಪ್ರಾಪ್ತಿ ಮಾಡಿಕೊಳ್ಳಬೇಕು. ಆಗಾಗ ಪಾಯಿಂಟ್‌ನ ವಿಸ್ತಾರದಲ್ಲಿ ಹೋಗಿಬಿಡುತ್ತೀರಿ. ಎಂದೂ ಪಾಯಿಂಟ್‌ನ (ಬಿಂದು) ರೂಪದಲ್ಲಿ ಸ್ಥಿರ ಆಗುವುದಿಲ್ಲ. ಬಿಂದು (ಪಾಯಿಂಟ್) ರೂಪ ಮತ್ತು ಜ್ಞಾನದ ಪಾಯಿಂಟ್ಸ್ ಜೊತೆಯಲ್ಲಿ ಇರಬೇಕು. ಅಂದಾಗ ಕಾರ್ಯದ ಶಕ್ತಿಯನ್ನು ಹೆಚ್ಚಿಸಿಕೊಳ್ಳಿ. ತಿಳಿದಿದ್ದೀರಾ? ನಂಬರ್‌ವನ್‌ನಲ್ಲಿ ಬರಬೇಕು ಎಂದರೆ ಇದು ಮಾಡಬೇಕಾಗುತ್ತದೆ.

ಈಗಿನ ಕಾಲದಲ್ಲಿ ವಿಜ್ಞಾನದ ಶಕ್ತಿ. ವಿಜ್ಞಾನದ ಸಾಧನೆಗಳ ಮುಖಾಂತರ ಕಾರ್ಯ ಶಕ್ತಿ ಎಷ್ಟು ತೀಕ್ಷ್ಣವಾಗುತ್ತಿದೆ! ಯಾವ ಕಾರ್ಯವನ್ನು ಚೈತನ್ಯ ಮನುಷ್ಯರು ಮಾಡಬಹುದೋ, ಎಷ್ಟು ಸಮಯದಲ್ಲಿ ಮತ್ತು ಎಷ್ಟು ಯಥಾರ್ಥ ಚೈತನ್ಯ ಮನುಷ್ಯರು ಮಾಡಬಹುದೋ ಅದಕ್ಕಿಂತಲೂ ಬೇಗ ವಿಜ್ಞಾನದ ಸಾಧನೆ ಕಂಪ್ಯೂಟರ್ ಕೆಲಸ ಮಾಡುತ್ತದೆ. ಚೈತನ್ಯ ಮನುಷ್ಯರನ್ನೂ ಸಹ ಸರಿ (ಕರೆಕ್ಷನ್) ಮಾಡುತ್ತದೆ. ವಿಜ್ಞಾನದ ಸಾಧನೆ ಕಾರ್ಯ ಶಕ್ತಿಯನ್ನು ಎಷ್ಟು ತೀಕ್ಷ್ಣವಾಗಿ ಮಾಡಬಹುದು ಅಂತಹ ಶೋಧನೆಗಳು ಹೊರಬಂದಿದೆ. ಹೊರಬರುತ್ತಾ ಇರುತ್ತದೆ. ಅಂದಾಗ ಬ್ರಾಹ್ಮಣ ಆತ್ಮರ ಸೈಲೆನ್ಸ್ (ಶಾಂತಿ) ಶಕ್ತಿ ಎಷ್ಟು ತೀಕ್ಷ್ಣವಾಗಿ ಕಾರ್ಯವನ್ನು ಯಥಾರ್ಥವಾಗಿ ಸಫಲ ಮಾಡಬಹುದು. ಸೆಕೆಂಡಿನಲ್ಲಿ ನಿರ್ಣಯ ಮಾಡಿ. ಸೆಕೆಂಡಿನಲ್ಲಿ ಕಾರ್ಯವನ್ನು ಪ್ರತ್ಯಕ್ಷ ರೂಪದಲ್ಲಿ ಸಫಲ ಮಾಡಿ. ಯೋಚನೆ ಮಾಡುವುದು. ಕರ್ಮ ಮಾಡುವುದು ಎರಡರ ಸಮತೋಲನೆ ಇರಬೇಕು. ಕೆಲವು ಬ್ರಾಹ್ಮಣ ಆತ್ಮರು ಬಹಳ ಯೋಚನೆ ಮಾಡುತ್ತಾರೆ. ಆದರೆ ಮಾಡುವ ಸಮಯದಲ್ಲಿ ಎಷ್ಟು ಯೋಚನೆ ಮಾಡಿರುತ್ತಾರೆಯೋ ಅಷ್ಟು ಪ್ರತ್ಯಕ್ಷವಾಗಿ ಕಾರ್ಯದಲ್ಲಿ ತರುವುದಿಲ್ಲ ಮತ್ತೆ ಕೆಲವರು ಮಾಡಿಬಿಡುತ್ತಾರೆ ನಂತರ ಮಾಡಿರುವುದು ಸರಿಯಾಗಿಯೇ ಮಾಡಿದ್ದೇನಾ ಅಥವಾ ಇಲ್ಲವೋ? ಎಂದು ಯೋಚನೆ ಮಾಡುತ್ತಾರೆ. ಈಗ ಏನು ಮಾಡಬೇಕು? ಯೋಚನೆ ಮತ್ತು ಮಾಡುವುದು ಎರಡು ಜೊತೆ-ಜೊತೆಯಲ್ಲಿ ಇರಬೇಕು. ಇಲ್ಲವೆಂದರೆ ಏನು ಆಗುತ್ತದೆ? ಯೋಚನೆ ಮಾಡುತ್ತೀರಿ ಇದನ್ನು ಮಾಡಬೇಕೆಂದು ಆದರೆ ಯೋಚನೆ ಮಾಡಿ ಮಾಡುತ್ತೇವೆ ಮತ್ತೆ ಯೋಚನೆ ಮಾಡುತ್ತಾ-ಮಾಡುತ್ತಾ ಕಾರ್ಯದ ಸಮಯ ಮತ್ತು ಪರಿಸ್ಥಿತಿ ಬದಲಾವಣೆ ಆಗಿಬಿಡುತ್ತದೆ. ಮತ್ತೆ ಈ ರೀತಿ ಮಾಡಬೇಕಾಗಿತ್ತು. ಯೋಚನೆ ಮಾಡುತ್ತಿದ್ದೆ ಎಂದು ಹೇಳುತ್ತಾರೆ. ಯಾವಾಗ ವಿಜ್ಞಾನದ ಸಾಧನೆಗಳು ಎಷ್ಟು ತೀಕ್ಷ್ಣವಾಗಿಬಿಟ್ಟಿದೆ, ಒಂದು ಸೆಕೆಂಡಿನಲ್ಲಿ ಏನು ಮಾಡುವುದಿಲ್ಲ! ವಿನಾಶದ ಸಾಧನೆಗಳು ತೀಕ್ಷ್ಣವಾಗುತ್ತಿದೆ ಅಂದಾಗ ಸ್ಥಾಪನೆಯ ಶಕ್ತಿಶಾಲಿ ಸಾಧನೆಗಳು ಏನು ತಾನೇ ಮಾಡಲು ಸಾಧ್ಯವಿಲ್ಲ? ಈಗಂತೂ ಪ್ರಕೃತಿ ತಾವು ಮಾಲಿಕರನ್ನು(ಯಜಮಾನಿ) ಆಹ್ವಾನ ಮಾಡುತ್ತಿದೆ. ಮಾಲಿಕರು ತಯಾರು ಆಗಿದ್ದೆ ಆದರೆ ಪ್ರಕೃತಿ ತಮ್ಮನ್ನು ಸ್ವಾಗತ ಮಾಡುತ್ತದೆ. ಈ ರೀತಿ ತಯಾರಾಗಿದ್ದೀರಾ? ಅಥವಾ ಈಗ ತಯಾರು ಮಾಡಿಕೊಳ್ಳುತ್ತಿದ್ದೀರಾ? ತಮ್ಮ ಸಂಪೂರ್ಣತೆಯ ಮಹಿಮೆಯನ್ನು ಭಕ್ತರು ಇದುವರೆಗೂ ಮಾಡುತ್ತಿದ್ದಾರೆ. ತಮ್ಮ ಮಹಿಮೆ ಏನು ಎಂದು ತಿಳಿಕೊಂಡಿದ್ದೀರಾ? ಸರ್ವಗುಣ ಸಂಪನ್ನ, ಸಂಪೂರ್ಣ ನಿರ್ವಿಕಾರಿ, ಸಂಪೂರ್ಣ ಅಹಿಂಸಕ, ಮರ್ಯಾದಾ ಪುರುಷೋತ್ತಮ, 16 ಕಲಾ ಸಂಪನ್ನ ಆಗಿದ್ದೇನೆಯೇ!!? ಎಂದು ಈಗ ಪರಿಶೀಲನೆ ಮಾಡಿಕೊಳ್ಳಿ. ಎಲ್ಲಾ ವಿಷಯದಲ್ಲಿ ಪೂರ್ಣ (ಫುಲ್) ಆಗಿದ್ದರೆ ಮಾಲಿಕ ತಯಾರಾಗಿದ್ದಾರೆ ಎಂದರ್ಥ ಮತ್ತೆ

ಇದರಲ್ಲಿ ಶೇಕಡಾ (ಪರ್‌ಸೆಂಟೇಜ್) ಇದ್ದರೆ ಮಾಲೀಕರು ತಯಾರಾಗಿಲ್ಲವೆಂದರ್ಥ. ಬಾಲಕರಾಗಿದ್ದೀರಿ, ಮಾಲಿಕಗಾಗಿಲ್ಲ. ಅಂದಾಗ ಪ್ರಕೃತಿ ತಾವು ಮಾಲಿಕರನ್ನು ಸ್ವಾಗತ ಮಾಡುತ್ತದೆ. ತಂದೆಗೆ ಬಾಲಕರಾಗಿದ್ದೀರಿ. ಅದಂತೂ ಸರಿ ಇದೆ. ಇದರಲ್ಲಿ ಪಾಸ್ ಆಗಿದ್ದೀರಿ. ಆದರೆ ಈ 5 ವಿಷಯಗಳಲ್ಲಿ ಸಂಪನ್ನರಾಗಬೇಕು ಅರ್ಥಾತ್ ಮಾಲಿಕರಾಗಬೇಕು. ಪ್ರಕೃತಿಯನ್ನು ಆರ್ಡರ್ (ಆಜ್ಞೆ) ಮಾಡಬೇಕು. ಒಳ್ಳೆಯದು. ತಪಸ್ಸಿನ ವರ್ಷದಲ್ಲಂತೂ ತಯಾರಾಗುತ್ತೀರಲ್ಲವೇ? ಮತ್ತೆ ಆಜ್ಞೆ ಮಾಡಿ. ಈ ತಪಸ್ಸಿನ ವರ್ಷ ಕೊನೆಯ ಅವಕಾಶವಾಗಿದೆಯೋ ಅಥವಾ ಮತ್ತೆ ಸ್ವಲ್ಪ ಅವಕಾಶ ಕೊಡಿ ಎಂದು ಕೇಳುತ್ತೀರೋ? ಮತ್ತೆ ಕೇಳುವುದಿಲ್ಲ ತಾನೆ? ಒಳ್ಳೆಯದು.

**ನಾಲ್ಕಾರು ಕಡೆಯ ಸರ್ವ ರಾಜ್ಯಾಧಿಕಾರಿ ಆತ್ಮರಿಗೆ, ಸದಾ ಡಬಲ್ ಸಿಂಹಾಸನಾಧಿಕಾರಿ ವಿಶೇಷ ಆತ್ಮರಿಗೆ, ಸದಾ ಯೋಚನೆ ಮಾಡುವುದು ಮತ್ತೆ ಮಾಡುವುದು ಎರಡು ಶಕ್ತಿಗಳನ್ನು ಸಮಾನವನ್ನಾಗಿ ಮಾಡಿಕೊಳ್ಳುವಂತಹ ವರದಾನಿ ಆತ್ಮರಿಗೆ. ಸದಾ ಪರಮಾತ್ಮನ ಪ್ರೀತಿ ನಿಭಾಯಿಸುವಂತಹ ಸತ್ಯ ಹೃದಯ ಮಕ್ಕಳಿಗೆ ಮನೋಭಿರಾಮ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 25-02-1991.

***ಯೋಚನೆ ಮತ್ತು ಕರ್ಮದಲ್ಲಿ ಸಮಾನತೆಯನ್ನು ತರುವುದೇ ಪರಮಾತ್ಮನ ಪ್ರೀತಿಯನ್ನು ನಿಭಾಯಿಸುವುದು.***

ಈ ಹಳೆಯ ಪ್ರಪಂಚದ ರಾಜ್ಯ ದರ್ಬಾರ್ ನ ಏರುಪೇರಂತೂ ಚೆನ್ನಾಗಿ ತಿಳಿದುಕೊಂಡಿದ್ದೀರಿ ಅದರಲ್ಲಿ ಲಾ (ನಿಯಮ/ಕಾನೂನು) ಇಲ್ಲ ಆರ್ಡರ್(ಅಧೀನತೆ) ಇಲ್ಲ. ಆದರೆ ನಿಮ್ಮ ರಾಜ್ಯ ದರ್ಬಾರ್ (ರಾಜ್ಯಸಭೆ) ಸದಾ ನಿಯಮಪೂರ್ವಕವಾಗಿಯೂ ಇರುತ್ತದೆ ಮತ್ತು ಸದಾ ಆಗಲಿ ಪ್ರಭು! ಎಂಬ ಆರ್ಡರ್ ನ ಮೇಲೆ ನಡೆಯುತ್ತಿರುತ್ತದೆ. ರಾಜ್ಯಾಧಿಕಾರಿ ಎಷ್ಟು ಶಕ್ತಿಶಾಲಿಯಾಗಿ ಇರುತ್ತಾರೆಯೋ, ಅಷ್ಟು ರಾಜ್ಯ, ಸಹಯೋಗಿ, ಕರ್ಮಚಾರಿಗಳು ಕೂಡ ಸ್ವತಹವಾಗಿ ಸದಾ ಆಜ್ಞೆಯಂತೆ ನಡೆಯುತ್ತವೆ. ಇದನ್ನು ಕೇಳಬಾರದು ಮತ್ತು ಇದನ್ನು ಮಾಡಬಾರದು ಇದನ್ನು ಮಾತನಾಡಬಾರದು ಎಂದು ಆಜ್ಞೆಯನ್ನು ಕೊಟ್ಟಾಕ್ಷಣ ಆಜ್ಞೆಯ ಪ್ರಮಾಣವಾಗಿ ಕಾರ್ಯ ಮಾಡಬೇಕು. ನೀವು ನೋಡಬಾರದು ಎಂದು ಆಜ್ಞಾಪಿಸಿದ್ದೀರಿ ಆದರೆ ನೋಡಿದ ನಂತರ ತಪ್ಪಾಯಿತು ಕ್ಷಮಿಸಿರಿ ಎಂದು ಕೇಳುವ ಹಾಗೆ ನಿಮ್ಮ ಕರ್ಮಚಾರಿಗಳು ಇರಬಾರದು. ಈ ರೀತಿ ಯೋಚಿಸುವವರನ್ನು ಬುದ್ಧಿಯುಳ್ಳ ಸಹಯೋಗಿ ಎಂದು ಕರೆಯುತ್ತಾರೆಯೇ? ವ್ಯರ್ಥ ಆಲೋಚಿಸಬಾರದು ಎಂದು ಮನಸ್ಸಿಗೆ ಆಜ್ಞೆಯನ್ನು ಕೊಟ್ಟಾಕ್ಷಣ ಸೆಕೆಂಡಿನಲ್ಲಿ ಬಿಂದು ಇಡಬೇಕು. ಎರಡನೆಯ ಕ್ಷಣವೂ ಅಲ್ಲ ಇದನ್ನೇ ಯುಕ್ತಿಯುಕ್ತ ರಾಜ್ಯಸಭೆ ಎಂದು ಕರೆಯುತ್ತಾರೆ. ಇಲ್ಲಿಯ ಸಫಲ ರಾಜಾಧಿಕಾರಿಯೇ ಭವಿಷ್ಯದಲ್ಲಿ ಸಫಲತೆಯ ವಿಶ್ವರಾಜ್ಯಾಧಿಕಾರವನ್ನು ಪ್ರಾಪ್ತಿ ಮಾಡಿಕೊಳ್ಳುತ್ತಾರೆ . ಸದಾ 100% ಸಫಲತೆ ಇಲ್ಲದಿದ್ದರೆ ಅಂತಹ ರಾಜ್ಯಾಧಿಕಾರಿ ಆತ್ಮರಿಗೆ ವಿಶ್ವದ ರಾಜ್ಯಸಿಂಹಾಸನ, ಕಿರೀಟ ಪ್ರಾಪ್ತಿಯಾಗುವುದಿಲ್ಲ ರಾಯಲ್ ಪರಿವಾರದಲ್ಲಿ ಮಾತ್ರ ಬರುತ್ತಾರೆ. ತಂದೆಯವರಾಗಿ, ತಂದೆಯಿಂದ ಪ್ರಾಪ್ತಿ ಯಾಗಿರುವ ಆಸ್ತಿಯನ್ನು ಕಾರ್ಯದಲ್ಲಿ ಉಪಯೋಗಿಸುವಂತಹ ವಿಧಿಯಲ್ಲಿ ಅಂತರ ಬರುತ್ತಿದೆ, ಇದರಿಂದಲೇ ನಂಬರ್ ತಯಾರಾಗುತ್ತಿದೆ. ಯೋಚನೆ ಮತ್ತು ಕರ್ಮದಲ್ಲಿ ಸಮಾನತೆ ಇರಬೇಕು ಎಂದು ಹೇಳುತ್ತಾ ಶಿವ ಪರಮಾತ್ಮ ತಿಳಿಸುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಈಗ ಸ್ವರಾಜ್ಯಾಧಿಕಾರಿಯಾಗಿ ಅನೇಕ ಜನ್ಮಗಳಿಗಾಗಿ ವಿಶ್ವರಾಜ್ಯಾಧಿಕಾರಿ ಆಗಿದ್ದೇನೆ.

2. ನನ್ನ ಸಹಯೋಗಿ ಕರ್ಮಚಾರಿಗಳಾದ ಸ್ಥೂಲ, ಸೂಕ್ಷ್ಮ ಕರ್ಮೇಂದ್ರಿಯಗಳು 100% ಆಜ್ಞಾಕಾರಿಯಾಗಿ, ಪ್ರಾಮಾಣಿಕವಾಗಿ, ಎವರ್ ರೆಡಿಯಾಗಿದ್ದಾರೆ.

3. ನನ್ನ ರಾಜ್ಯ ಸಭೆ ಲಾ (ಕಾನೂನು) & ಆರ್ಡರ್ ನ (ಅಧೀನದಲ್ಲಿ) ಪ್ರಕಾರ ನಡೆಯುತ್ತಿದೆ.

4. ನಾನು ನನ್ನ ತಪ್ಪನ್ನು ಪರಿಶೀಲಿಸಿಕೊಂಡು ಯುಕ್ತಿ ಅಥವಾ ಜ್ಞಾನದ ಶಕ್ತಿಯಿಂದ ಪರಿವರ್ತನೆ ಮಾಡಿಕೊಂಡಿದ್ದೇನೆ.

5. ನಾನು ಸ್ವಯಂನ ಪುರುಷಾರ್ಥದೊಂದಿಗೆ, ನನ್ನ ಸಂಬಂಧ, ಸಂಪರ್ಕಗಳಲ್ಲಿ ಬರುವ ಆತ್ಮರು ಕೂಡ ಸಂತುಷ್ಟವಾಗಿ ಇರುತ್ತಾ, ಸದಾ ಮನಸ್ಸಿನಿಂದ ಸಂತೋಷವಾಗಿ ಧನ್ಯವಾದಗಳನ್ನು ಹೇಳುತ್ತಾ ಆಹಾ ಆಹಾ ಎಂಬ ಹಾಡುಗಳನ್ನು ಹಾಡುವಷ್ಟು ಸಫಲ ರಾಜ್ಯಾಧಿಕಾರಿಯಾಗಿದ್ದೇನೆ.

6. ನಾನು ವಿಶ್ವದ ರಾಜ್ಯ ಸಿಂಹಾಸನ ಮತ್ತು ಕಿರೀಟವನ್ನು ಪಡೆದಿರುವ ಸದಾ 100%ಸಫಲ ರಾಜ್ಯಾಧಿಕಾರಿ.

7. ನಾನು ಪರಿಸ್ಥಿತಿಯನ್ನು ಶ್ರೇಷ್ಠ ಸ್ಥಿತಿಯಲ್ಲಿ ಪರಿವರ್ತನೆ ಮಾಡಿಕೊಂಡು ಪರಮಾತ್ಮನ ಪ್ರೀತಿಯನ್ನು ಪಡೆದಿರುವ ಬುದ್ಧಿವಂತನು.

8. ನಾನು ಪರಮಾತ್ಮನ ಪ್ರೀತಿಯನ್ನು ನಿಭಾಯಿಸಿ ಅಂತಿಮದವರೆಗೂ ಪ್ರತಿಯೊಂದು ಕಷ್ಟವನ್ನು ದಾಟಿಸಲು (ಪ್ರೀತಿಯ ರೀತಿ) ತಂದೆಯ ಸಹಯೋಗವನ್ನು ಪಡೆದು ಪರಿಸ್ಥಿತಿಯನ್ನು ಶ್ರೇಷ್ಠ ಸ್ಥಿತಿಯಲ್ಲಿ ಬದಲಾವಣೆ ಮಾಡಿಕೊಂಡಿದ್ದೇನೆ.

9. ನಾನು ತಂದೆಯವರಾಗುವ ವಿಧಿ, •ತಂದೆಯಿಂದ ಆಸ್ತಿ(ವಾರಸತ್ವ) ವನ್ನು ಪಡೆಯುವ ವಿಧಿ, •ಪಡೆದಿರುವ ವಾರಸತ್ವವನ್ನು ಕಾರ್ಯದಲ್ಲಿ ಉಪಯೋಗಿಸುವ ವಿಧಿ ಈ ಮೂರರಲ್ಲಿ ನಂಬರ್ ವನ್ ಆಗಿ ಇದ್ದೇನೆ. (ಪಡೆದಿರುವ ವಾರಸತ್ವವನ್ನು ಕಾರ್ಯದಲ್ಲಿ ಉಪಯೋಗಿಸುವುದರಲ್ಲಿ ಅಂತರ ಬರುತ್ತಿದೆ ಇದರಿಂದಲೇ ನಂಬರ್ ಲಭಿಸುತ್ತಿದೆ)

10. ನಾನು ಜ್ಞಾನದ ಪಾಯಿಂಟ್ಸ್ ಅನ್ನು ಬುದ್ಧಿಯಲ್ಲಿಟ್ಟುಕೊಳ್ಳುವುದು ಮತ್ತು ಆ ಪಾಯಿಂಟ್ಸ್ ಅನ್ನು ಕಾರ್ಯದಲ್ಲಿ ಉಪಯೋಗಿಸುವ ವಿಷಯಗಳಲ್ಲಿ ಸಮಾನತೆಯನ್ನಿಟ್ಟು ನಂಬರ್ ವನ್ ವಿಧಿಯಿಂದ ನಂಬರ್ ವನ್ ಸಿದ್ಧಿಯನ್ನು ಪಡೆದಿದ್ದೇನೆ.

11. ನಾನು ಯೋಚಿಸುವುದು ಮತ್ತು ಪ್ರತ್ಯಕ್ಷದಲ್ಲಿ ಕಾರ್ಯ ಮಾಡುವುದನ್ನು ಸಮಾನವಾಗಿ ಉಳಿಸಿಕೊಂಡು ಸಫಲತೆಯನ್ನು ಪಡೆದಿದ್ದೇನೆ.

12. ಮಾಲಿಕನಾದ ನಾನು ತಯಾರಾಗಿ ಪ್ರಕೃತಿಯಿಂದ ಸ್ವಾಗತವನ್ನು ಪಡೆದಿದ್ದೇನೆ.

13. ನಾನು ಸಂಪೂರ್ಣ ನಿರ್ವಿಕಾರಿಯಾಗಿ, ಸಂಪೂರ್ಣ ಅಹಿಂಸಕನಾಗಿ, ಮರ್ಯಾದಾ ಪುರುಷೋತ್ತಮನಾಗಿ & 16 ಕಲಾ ಸಂಪೂರ್ಣವಾಗಿ ಇರುವ ಮಾಲಿಕನು (ಯಜಮಾನಿ).